12-12-24

(19)

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜ ಇವರು ದಿನಾಂಕ: 12.12.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಿರುವ ವಿಷಯಕ್ಕೆ ಉತ್ತರ.**

**ಪ್ರಸ್ತಾಪಿತ ವಿಷಯ:**

ಮಂಗಳೂರು ನಗರದಲ್ಲಿ ಸುಮಾರು 8 ಸಾವಿರಕ್ಕೂ ಅಧಿಕ ರಹದಾರಿ ಮತ್ತು ಪರವಾನಿಗೆ ಆಟೋರಿಕ್ಷಾ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಎಲೆಕ್ಟ್ರಿಕಲ್ (ಬ್ಯಾಟರಿ) ಆಟೋರಿಕ್ಷಾಗಳ ಪರವಾನಿಗೆ ಇಲ್ಲದೆ ಕಾರ್ಯ ನಿರ್ವಹಿಸುತ್ತಿದ್ದು, ಮಂಗಳೂರು ನಗರದಲ್ಲಿ ಇರುವ ಅವಶ್ಯಕತೆಗಿಂತಲೂ ಈಗಾಗಲೇ ಸುಮಾರು 3 ಸಾವಿರಕ್ಕೂ ಹೆಚ್ಚು ವಿದ್ಯುತ್ ಚಾಲಿತ ಆಟೋರಿಕ್ಷಾಗಳು ಓಡಾಟದಲ್ಲಿರುವ ಕಾರಣ ಸೂಕ್ತ ರಿಕ್ಷಾ ನಿಲ್ದಾಣಗಳಿಲ್ಲದೇ ಪರದಾಡುತ್ತಿರುವ ಸಂದರ್ಭ ಒದಗಿ ಬಂದಿದೆ. ನಗರದಲ್ಲಿ ಸುಮಾರು 500ಕ್ಕೂ ಅಧಿಕ ರಿಕ್ಷಾ ನಿಲ್ದಾಣಗಳ ಬೇಡಿಕೆ ಇದ್ದರೂ, ಕೇವಲ 150 ರಿಕ್ಷಾ ನಿಲ್ದಾಣಗಳು ಮಾತ್ರ ಮಂಗಳೂರು ಮಹಾನಗರ ಪಾಲಿಕೆ ಒದಗಿಸಿದೆ. ಪ್ರಸ್ತುತ ರಿಕ್ಷಾ ಚಾಲಕರಿಗೆ ಬಾಡಿಗೆ ಇಲ್ಲದೆ ತಮ್ಮ ಕುಟುಂಬದ ನಿರ್ವಹಣೆಗೆ ತೊಂದರೆಗೆ ಒಳಗಾಗುತ್ತಿದ್ದು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಇಂದು ರಿಕ್ಷಾ ಚಾಲಕರು ತಮ್ಮ ಬೇಡಿಕೆಯನ್ನು ಮುಂದಿಟ್ಟು ಪ್ರತಿಭಟನೆ ಮಾಡುತ್ತಿದ್ದಾರೆ.

ಕಳೆದ 6 ತಿಂಗಳಿಂದ ಮಂಗಳೂರು ನಗರದಲ್ಲಿ ಎಲೆಕ್ಟ್ರಿಕಲ್ (ಬ್ಯಾಟರಿ) ಚಾಲಿತ ಆಟೋರಿಕ್ಷಾಗಳು ಯಾವುದೇ ಪರವಾನಿಗೆ / ರಹದಾರಿ (ಪರ್ಮಿಟ್) ಇಲ್ಲದೇ ಏಕಾಏಕಿಯಾಗಿ ಎಲ್ಲಾ ನಿಲ್ದಾಣಗಳಲ್ಲಿ ಮತ್ತು ಎಲ್ಲಾ ಬಾಡಿಗೆ ದೊರೆಯುವ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ ಯಾವುದೇ ಪರವಾನಿಗೆ ರಹದಾರಿ ಇಲ್ಲದೇ ಇರುವುದರಿಂದ ರಹದಾರಿ ಪಡೆದು ಚಾಲನೆ ಮಾಡುತ್ತಿರುವ ರಿಕ್ಷಾ ಚಾಲಕರಿಗೆ ಬಾಡಿಗೆ ಇಲ್ಲದೆ ಪರದಾಡುತ್ತಿರುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಮಂಗಳೂರು ನಗರಕ್ಕೆ ಬಂದು ರಿಕ್ಷಾ ಚಾಲನೆ ಮಾಡುವುದರಿಂದ ಮತ್ತು ನಿಯಮಗಳಲ್ಲಿ ಎಲೆಕ್ಟ್ರಿಕಲ್ (ಬ್ಯಾಟರಿ) ಚಾಲಿತ ಆಟೋ ರಿಕ್ಷಾಗಳಿಗೆ ಯಾವುದೇ ಪರವಾನಿಗೆ ಅಗತ್ಯವಿಲ್ಲದೇ ಇರುವುದರಿಂದ ಪೊಲೀಸರು ಮತ್ತು ಆರ್.ಟಿ.ಓ. ಅಧಿಕಾರಿಗಳಿಗೆ ಯಾವುದೇ ದಂಡ ವಿಧಿಸುವ ಅಧಿಕಾರವನ್ನು ಕಳೆದುಕೊಂಡಿರುತ್ತಾರೆ.

ಕೇಂದ್ರ ಸರ್ಕಾರದ ಪರವಾನಿಗೆ ಇಲ್ಲದೇ ಎಲೆಕ್ಟ್ರಿಕಲ್ (ಬ್ಯಾಟರಿ) ಚಾಲಿತ ಆಟೋರಿಕ್ಷಾಗಳಿಗೆ ನೀಡಿರುವ ವಿನಾಯಿತಿ ಕ್ರಮಕ್ಕೆ ತಮಿಳುನಾಡು ಮತ್ತು ದೆಹಲಿ ಸರ್ಕಾರಗಳು ನಿಯಮಗಳನ್ನು ರೂಪಿಸಿ, ಎಲೆಕ್ಟ್ರಿಕಲ್ (ಬ್ಯಾಟರಿ) ಚಾಲಿತ ಆಟೋರಿಕ್ಷಾಗಳು ನಿಯಂತ್ರಣಗೊಳಿಸಲು ಮತ್ತು ನಿಯಮ ರೂಪಿಸಿ ಎಲೆಕ್ಟ್ರಿಕಲ್ (ಬ್ಯಾಟರಿ) ಚಾಲಿತ ರಿಕ್ಷಾಗಳನ್ನು ಪ್ರಸ್ತುತ ಇರುವ ಆಟೋರಿಕ್ಷಾಗಳ ನಿಯಮದಲ್ಲಿಯೇ ಕಾರ್ಯಾಚರಣೆ ಮಾಡುವಂತೆ ನಿಯಮಗಳನ್ನು ರೂಪಿಸಿದೆ. ಅದರ ಪ್ರತಿಯನ್ನು ಲಗತ್ತಿಕರಿಸಿದ್ದೇನೆ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಬ್ಯಾಟರಿ ಚಾಲಿತ ಆಟೋರಿಕ್ಷಾಗಳಿಗೆ ಪರವಾನಿಗೆಯನ್ನು ಕಡ್ಡಾಯಗೊಳಿಸಬೇಕು. ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಸಾರಿಗೆ ಸಚಿವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

**ಉತ್ತರ :**

ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: S.O 5333 (E), ದಿನಾಂಕ:18-10-2018ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರದಡಿ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಸಾರಿಗೆ ವಾಹನಗಳು ಹಾಗೂ ಬ್ಯಾಟರಿ ಆಧಾರಿತ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಹದಾರಿ ವಿನಾಯತಿ ನೀಡಿ ಆದೇಶವನ್ನು ಹೊರಡಿಸಲಾಗಿರುತ್ತದೆ ಹಾಗೂ ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: GSR 525 (E), ದಿನಾಂಕ: 02-08-2021ರಲ್ಲಿ ಬ್ಯಾಟರಿ ಆಧಾರಿತ ವಾಹನಗಳಿಗೆ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ, ನಿಯಮ 81ರಲ್ಲಿ ನಿಗದಿಪಡಿಸಿರುವ ನೋಂದಣಿ ಶುಲ್ಕದಿಂದ ವಿನಾಯತಿ ನೀಡಿ ಆದೇಶ ಹೊರಡಿಸಲಾಗಿರುತ್ತದೆ.

ಮುಂದುವರೆದು, ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಓ 2019, ದಿನಾಂಕ:20-01-2022ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಡಿ ರಹದಾರಿ ವಿನಾಯತಿ ನೀಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಆಟೋರಿಕ್ಷಾ ಚಾಲಕ ಮಾಲಕರ ಸಂಘಗಳ ಒಕ್ಕೂಟ, ಮಂಗಳೂರು ಅವರ ಮನವಿ ಪತ್ರ ದಿನಾಂಕ: 22-02-2024ರಲ್ಲಿ ನೆರೆಯ ರಾಜ್ಯದಲ್ಲಿ ಬ್ಯಾಟರಿ ಚಾಲಿತ ಸಾರಿಗೆ ವಾಹನಗಳಿಗೆ ಶುಲ್ಕ ರಹಿತ ರಹದಾರಿಯನ್ನು ಕಡ್ಡಾಯಗೊಳಿಸಿದ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಬ್ಯಾಟರಿ ಚಾಲಿತ ಆಟೋರಿಕ್ಷಾಗಳಿಗೆ ಪರವಾನಿಗೆಯನ್ನು ಕಡ್ಡಾಯಗೊಳಿಸಲು ಕೋರಿರುತ್ತಾರೆ.

ರಾಜ್ಯ ಸರ್ಕಾರದ ಅಧಿಸೂಚನೆಯಿಂದ ಬ್ಯಾಟರಿ ಚಾಲಿತ ವಾಹನಗಳು, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಸಾರಿಗೆ ವಾಹನಗಳ ನಿಯಂತ್ರಣ ಹಾಗೂ ವಾಹನಗಳ ಮೇಲೆ ನಿಗಾವಹಿಸಲು ತೊಂದರೆಯಾಗುತ್ತಿದ್ದು, ಸದರಿ ವಾಹನಗಳ ವಿರುದ್ಧ ಮೋಟಾರು ವಾಹನಗಳ ಕಾಯ್ದೆ ಮತ್ತು ಅದರಡಿ ರಚಿತವಾದ ನಿಯಮಗಳನ್ವಯ ಕ್ರಮ ಕೈಗೊಳ್ಳಲು ಕಷ್ಟಸಾಧ್ಯವಾಗುವುದಲ್ಲದೆ, ಇತರೆ ಇಂಧನದಿಂದ ಸಂಚರಿಸುವ ವಾಹನಗಳ ಮಾಲೀಕರು/ ಚಾಲಕರುಗಳ ನಡುವೆ ತಾರತಮ್ಯತೆ ಉಂಟಾಗುವುದರಿಂದ ಅನಿರೀಕ್ಷಿತ ಅನಾರೋಗ್ಯಕರ ಸ್ಪರ್ಧೆ ಉಂಟಾಗುವ ಸಾಧ್ಯತೆಗಳು ಹೆಚ್ಚಾಗುವುದು ಸಹ ಕಂಡುಬಂದಿರುತ್ತದೆ.

ಈ ಮೇಲ್ಕಂಡ ಅಂಶಗಳಿಂದ, ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಓ 2019, ದಿನಾಂಕ:20-01-2022ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಡಿ ರಹದಾರಿ ವಿನಾಯತಿ ನೀಡಿರುವ ಆದೇಶವನ್ನು ಹಿಂಪಡೆದು ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3) (ಎನ್) ಮತ್ತು ಕಲಂ 96 (xxxiii) ರಲ್ಲಿ ಪ್ರದತ್ತವಾದ ಅಧಿಕಾರದಡಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಸಂಬಂಧಪಟ್ಟ ರಹದಾರಿಯನ್ನು ಶುಲ್ಕ ರಹಿತವಾಗಿ ಮಂಜೂರು ಮಾಡುವ ಕುರಿತ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಟಿಡಿ 76 ಟಿಡಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು